

## ನಂದಿಗ್ರಾಮದ ಮನಮೋಹಕ ಶಿಲಾಛತ್ರಿ

ಬೆಂಗಳೂರಿನಿಂದ ಸುಮಾರು 60ಕಿ.ಮೀ. ದೂರ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಬೆಟ್ಟದ ಕೆಳಭಾಗದಲ್ಲಿರುವ ನಂದಿಗ್ರಾಮ ಅಪರೂಪದ ವಾಸ್ತುಶಿಲ್ಪಕ್ಕೆ ಹೆಸರಾಗಿದೆ. ಸುಮಾರು 900 ವರ್ಷಗಳ ಹಿಂದೆ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ಇಲ್ಲಿನ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ಜೋಡಿ ದೇವಾಲಯದ ಪ್ರಾಂಗಣದಲ್ಲಿ ಕರಿ ಕಲ್ಲಿನ ಸುಂದರ ಕಂಬಗಳಿಂದ ಕೂಡಿದ ಮುಖ ಮಂಟಪ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಇದರ ಕೆಳಗೆ ಮೆಟ್ಟಿಲುಗಳ ಪಕ್ಕದಲ್ಲಿ ಸುಮಾರು ಐದು ಅಡಿ ವ್ಯಾಸದ ಹತ್ತು ಅಡಿ ಎತ್ತರ ಮತ್ತು ಒಂದೂ ಕಾಲು ಅಡಿ ದಪ್ಪ ಹಿಡಿಕೆಯ ಅಪರೂಪದ ಕಲ್ಲಿನ ಛತ್ರಿ ಯಾತ್ರಿಕರ ಗಮನ ಸೆಳೆಯುತ್ತದೆ. ಏಕ ಕಪ್ಪು ಶಿಲೆಯಿಂದ ನಿರ್ಮಿಸಲಾಗಿರುವ ಈ ಛತ್ರಿ ಅಂದಿನ ಅರಸರ ಕಲಾಪ್ರೌಢಿಮೆಗೆ ಸಾಕ್ಷಿಯಾಗಿದೆ.

–ಶ್ರೀರಂಗ ವೆಂ. ಕಟ್ಟಿ., ಯಲ್ಲಾಪುರ

## ಗೀಜಗ ಹಕ್ಕಿ ಗೂಡು

ಗೀಜಗ ಹಕ್ಕಿಯು ಗಾತ್ರದಲ್ಲಿ ಗುಬ್ಬಚ್ಚಿಯೇ. ಸಂತಾನೋತ್ಪತ್ತಿ ಕಾಲದಲ್ಲಿ ವಿಭಿನ್ನವಾಗಿ ಕಾಣುವ ಈ ಹಕ್ಕಿಯು ಬಳಿಕ ಗುಬ್ಬಿಗಳ ಬಣ್ಣ ಹೋಲುವಂತೆ ಕಾಣುತ್ತವೆ. ಕೃಷಿ ಪ್ರದೇಶದಲ್ಲಿ ಹೆಚ್ಚಾಗಿ ಗೂಡು ಕಟ್ಟಿ ವಾಸಿಸುವ ಈ ಹಕ್ಕಿಗಳು ಪೆಸ್ಸಾರಿಡೇ ಕುಟುಂಬಕ್ಕೆ ಸೇರಿವೆ. ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬರ್ಮಾ ದೇಶಗಳಲ್ಲಿ ಇವುಗಳನ್ನು ಹೆಚ್ಚಾಗಿ ಕಾಣಬಹುದು.

ಇವು ಗೂಡನ್ನು ಕಟ್ಟುವ ಕಾಲ ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳು. ತುಂಬಾ ಕುಶಲತೆಯಿಂದ ಇವು ಕಟ್ಟುವ ಗೂಡುಗಳು ಸುಂದರವಾಗಿ, ಅಂದವಾಗಿ ಇರುತ್ತವೆ. ಜಮೀನಿನಲ್ಲಿ ಬೆಳೆದ ಭತ್ತದ ಹುಲ್ಲನ್ನೇ ಬಳಸುತ್ತವೆ. ಗೂಡು ಹೂಜಿಯಂತೆ ಅಥವಾ ಬಟ್ಟಿಪಾತ್ರೆಯ ರೀತಿಯಲ್ಲಿರುತ್ತದೆ. ಇವು ಗೂಡು ಕಟ್ಟುವಾಗಲೇ ಗೂಡನ್ನು ಮೂರು ಭಾಗಗಳಾಗಿ ಮಾಡಿಕೊಂಡಿರುತ್ತವೆ. ಮೊಟ್ಟೆಯಿಡುವ ವಿಶಾಲವಾದ ಭಾಗ, ಕೊಂಬೆಗೆ ತೂಗುಹಾಕುವ ಭಾಗ, ಮತ್ತು ಪ್ರವೇಶದ್ವಾರ. ಅವುಗಳು ಗೂಡಿನ ಒಳಗೆ ಹೋಗುವ ಪ್ರವೇಶದ್ವಾರವು ಕೆಳಮುಖವಾಗಿ ತೆರೆದಿರುತ್ತದೆ. ಮೊಟ್ಟೆಯಿಡುವ ಭಾಗದಲ್ಲಿ ಹಸಿ ಜೇಡಿಮಣ್ಣನ್ನು ಮೆತ್ತಿರುವುದನ್ನು ಕಾಣಬಹುದು. ಗೂಡು ಕಟ್ಟುವುದು ಗಂಡು ಹಕ್ಕಿಯ ಕೆಲಸ. ಮೊಟ್ಟೆಗಳನ್ನಿಟ್ಟು ಕಾವು ಕೊಡುವುದು ಹೆಣ್ಣು ಹಕ್ಕಿಯ ಕೆಲಸ.

–ವೇದಾವತಿ ಹೆಚ್. ಎಸ್.,
ಬೆಂಗಳೂರು





## ಮರೆಯಾದ ಅಡ್ಡಣಿಗೆ

ಆಧುನಿಕ ಬದುಕಿನ ವ್ಯವಸ್ಥೆಗೆ ಹೊಂದಿಕೊಂಡ ನಮ್ಮಿಂದ ಹಳೆಯ ಆಚಾರ ವಿಚಾರಗಳು ಒಂದೊಂದಾಗಿ ಮರೆಯಾಗುತ್ತಿವೆ. ಡೈನಿಂಗ್ ಟೇಬಲ್ ಮೇಲೆ ಊಟ ಮಾಡುವ ಸಂಸ್ಕೃತಿ ಇಂದಿನದ್ದಾದರೂ ಮೂಲ ಹಳೆಯ ಕಾಲದ್ದೇ ಎನ್ನಬಹುದು.

ಒಬ್ಬರೇ ಊಟ ಮಾಡಲು ಹಿಂದಿನ ಕಾಲದಲ್ಲಿ 'ಅಡ್ಡಣಿಗೆ' ಬಳಸಲಾಗುತ್ತಿತ್ತು. ಅದು ಈಗ ಮರೆಯಾಗಿದೆ. ಹಿತ್ತಾಳೆಯಿಂದ ಮಾಡಲಾದ ಅಡ್ಡಣಿಗೆ ಶಿಸ್ತುಬದ್ಧ ಊಟಕ್ಕೆ ಅನುಕೂಲವಾಗುತಿತ್ತು. ಮಣೆ ಹಾಕುವ ಪದ್ಧತಿಯೂ ಮರೆಯಾಗಿದೆ. ಆದರೆ, ಕೆಲವೊಂದು ಕಡೆ ಇನ್ನೂ ಕಂಡು ಬರುತ್ತಿರುವುದು ಇನ್ನೂ ಒಳ್ಳೆಯದು.

–ಭೋಜರಾಜ ಸೊಪ್ಪಿಮಠ, ಕೊಪ್ಪಳ

